# ಸರ್ಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಪದವಿ ಪೂರ್ವ ಕಾಲೇಜು.

## ಭುವನಹಳ್ಳಿ, ಶಿರಾ.

| | |
|---|---|
| ಪ್ರಾರಂಭವಾದ ವರ್ಷ ಮತ್ತು ದಿನಾಂಕ | 27/06/2017 |
| ಸರ್ಕಾರಿ ಆದೇಶ ಸಂಖ್ಯೆ | MWD 185 MDS 2017 ದಿನಾಂಕ:24/06/2017 |
| ನಿವೇಶನದ ವಿಸ್ತೀರ್ಣ | 4000 ಚ.ಮೀ |
| ಕಟ್ಟಡದ ವಿಸ್ತೀರ್ಣ &ಸ್ವರೂಪ | 430 ಚ.ಅಡಿ ಸ್ವಂತ ಕಟ್ಟಡ |
| ಅಕ್ಷಾಂಶ ರೇಖಾಂಶ | $13.56^0$ N $76.90^0$ E |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 240 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 160 |
| ತರಗತಿ | ಪ್ರಥಮ & ದ್ವಿತೀಯ ಪಿ.ಯು.ಸಿ ಪಿಸಿಎಂಬಿ & ಹೆಚ್ಇಬಿಎ |
| ಮಾಧ್ಯಮ | ಆಂಗ್ಲ |



ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿ–04ರ ಸಮೀಪದಲ್ಲಿರುವ ಭುವನಹಳ್ಳಿ ವ್ಯಾಪ್ತಿಯಲ್ಲಿ ಸರ್ಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಪದವಿ ಪೂರ್ವ ಕಾಲೇಜು ಪ್ರಾರಂಭವಾಗಿದ್ದು, ತುಮಕೂರು ಜಿಲ್ಲೆಯ ಐತಿಹಾಸಿಕ ನಗರಿ ಶಿರಾ ತಾಲ್ಲೂಕಿನಲ್ಲಿದೆ. ಸದರಿ ವಸತಿ ಕಾಲೇಜು ಶೈಕ್ಷಣಿಕ ವರ್ಷ 2017–2018 ನೇ ಸಾಲಿನಲ್ಲಿ ಸರ್ಕಾರದಿಂದ ಮಂಜೂರಾತಿ ಪಡೆದು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡದಲ್ಲಿ 30 ವಿದ್ಯಾರ್ಥಿಗಳೊಂದಿಗೆ ಕಾರ್ಯಾರಂಭ ಮಾಡಿ, ತದನಂತರ ತನ್ನ ಸ್ವಂತ ಕಟ್ಟಡವನ್ನು ಶಿರಾ ನಗರಕ್ಕೆ ಸಮೀಪವಿರುವ ಭುವನಹಳ್ಳಿ ಗ್ರಾಮದ ವ್ಯಾಪ್ತಿಗೆ ಸ್ಥಳಾಂತರಗೊಂಡು, ವಿಶಾಲವಾದ 4 ಎಕರೆ ಭೂ–ಪ್ರದೇಶದಲ್ಲಿ ಭವ್ಯವಾದ ಕಾಲೇಜು ಕಟ್ಟಡ, ಸುಸಜ್ಜಿತ ಪ್ರಾಯೋಗಾಲಯ ಮತ್ತು ಗ್ರಂಥಾಲಯ, ವಸತಿ ನಿಲಯ ಮತ್ತು ಸುಂದರವಾದ ಉದ್ಯಾನವನ ಹೊಂದಿದೆ.

ಪ್ರಸ್ತುತ 160 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲಿ ವಿದ್ಯಾರ್ಜನೆ ನಡೆಯುತ್ತಿದೆ. ಶೈಕ್ಷಣಿಕವಾಗಿ 2018–19ನೇ ಸಾಲಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಶೇ.100 ರಷ್ಟು ಮತ್ತು ವಿಜ್ಞಾನ ವಿಭಾಗದಲ್ಲಿ ಶೇ 90 ರಷ್ಟು ಮತ್ತು 2019–20ನೇ ಸಾಲಿನಲ್ಲಿ ಶೇ 93 ರಷ್ಟು ಫಲಿತಾಂಶ ಸಾಧಿಸಿದ್ದು ವಸತಿ ಕಾಲೇಜಿನ ಶೈಕ್ಷಣಿಕ ಪ್ರಗತಿಗೆ ಹಿಡಿದ ಕೈಗನ್ನಡಿಯಾಗಿದೆ.

ಉಪನ್ಯಾಸಕರ ಪರಿಣಾಮಕಾರಿ ಬೋಧನೆ ಅವರ ಅರ್ಪಣಾಭಾವ, ಪಠ್ಯ ಮತ್ತು ಪಠ್ಯೇತರ ವಿಷಯಗಳ ಜೊತೆಗೆ ಸಿಇಟಿ, ನೀಟ್ ಮತ್ತು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾಲೇಜಿನ ವಾತಾವರಣವು ಸಹಕಾರಿಯಾಗಿದ್ದು. ಕಾಲೇಜಿನಿಂದ ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರು ವಿವಿಧ ವೃತ್ತಿಪರ ಮತ್ತು ಉನ್ನತ ಶಿಕ್ಷಣವನ್ನು ವ್ಯಾಸಂಗ ಮಾಡುತ್ತಿರುವುದು ಕಾಲೇಜಿಗೆ ಹೆಮ್ಮೆಯ ವಿಷಯವಾಗಿದೆ.